# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಸೃಜಿಸಿ ನಿಯೋಜನೆಗೊಂಡು ಕರ್ತವ್ಯ ನಿರ್ವಹಿಸುತ್ತಿರುವ 35 ಹೊಸ ತಾಲ್ಲೂಕು ಪಂಚಾಯತಿಗಳ ಅಗತ್ಯ ವೇತನೇತರ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಡತ ಸಂಖ್ಯೆ: ಗ್ರಾಅಪ 197 ಜಿಪಸ 2020 (ಇ-ಆಫೀಸ್)

**ಪ್ರಸ್ತಾವನೆ:**

ರಾಜ್ಯದಲ್ಲಿ 50 ಹೊಸ ತಾಲ್ಲೂಕುಗಳನ್ನು ಸೃಜಿಸಲಾಗಿದ್ದು ಅದಕ್ಕೆದುರಾಗಿ ತಾಲ್ಲೂಕು ಪಂಚಾಯತಿಗಳನ್ನು ಸೃಜಿಸಲು ರಾಜ್ಯಪತ್ರವನ್ನು ಹೊರಡಿಸಿದೆ. ಹೊಸದಾಗಿ ಸೃಜಿಸಲಾಗಿರುವ 50 ತಾಲ್ಲೂಕು ಪಂಚಾಯತಿಗಳಲ್ಲಿ 35 ತಾಲ್ಲೂಕು ಪಂಚಾಯತಿಗಳು ಕಾರ್ಯನಿರ್ವಹಿಸುತ್ತಿದ್ದು ಪ್ರಸ್ತಾವಿತ 35 ತಾಲ್ಲೂಕು ಪಂಚಾಯತಿಗಳ ನಿಧಿ ಲೆಕ್ಕಗಳನ್ನು ಸಂಬಂಧಿಸಿದ ಖಜಾನೆಗಳಲ್ಲಿ ತೆರೆಯದಿರುವ ಕಾರಣ ಕಛೇರಿ ನಿರ್ವಹಣೆಗಾಗಿ ಅಂದರೆ, ಬಾಡಿಗೆ, ಸಂಭಾವನೆ, ವಿದ್ಯುತ್, ನೀರಿನ ಶುಲ್ಕ, ದೂರವಾಣಿ ವೆಚ್ಚ ಮತ್ತಿತರೆ ಅಗತ್ಯ ವೇತನೇತರ ವೆಚ್ಚಕ್ಕಾಗಿ ತಲಾ ರೂ.2.00ಲಕ್ಷಗಳಂತೆ ಒಟ್ಟು ರೂ.70.00ಲಕ್ಷಗಳನ್ನು ಬಿಡುಗಡೆಗೊಳಿಸುವಂತೆ ಮೇಲೆ (2)ರಲ್ಲಿ ಓದಲಾದ ಕಡತದಲ್ಲಿ ಪ್ರಸ್ತಾವಿಸಲಾಗಿದೆ.

ಪ್ರಸ್ತಾವಿತ ತಾಲ್ಲೂಕು ಪಂಚಾಯತಿಗಳ ಲೆಕ್ಕಗಳನ್ನು ಖಜಾನೆಗಳಲ್ಲಿ ತೆರೆಯದಿರುವ ಕಾರಣ ಹೊಸದಾಗಿ ಸೃಜಿಸುವ ಮುನ್ನ ಹಿಂದೆ ತಾಲ್ಲೂಕುಗಳಲ್ಲಿ ಇದ್ದ ತಾಲ್ಲೂಕುಗಳಿಗೆ ಹೊಸ ತಾಲ್ಲೂಕು ಪಂಚಾಯತಿಗಳ ಅಗತ್ಯ ವೇತನೇತರ ವೆಚ್ಚಕ್ಕಾಗಿ ತಲಾ ರೂ.2.00ಲಕ್ಷಗಳಂತೆ ಬಿಡುಗಡೆಗೊಳಿಸಿ ಸದರಿ ವೆಚ್ಚವನ್ನು ಹೊಸದಾಗಿ ಸೃಜಿಸಿ ಕರ್ತವ್ಯ ನಿರ್ವಹಿಸುತ್ತಿರುವ ಹೊಸ ತಾಲ್ಲೂಕು ಪಂಚಾಯತಿಗಳ ವೇತನೇತರ ವೆಚ್ಚವನ್ನು ಭರಿಸಲು ತಿಳಿಸುವಂತೆ ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 136 ವೆಚ್ಚ 6/2020(ಇ-ಆಫೀಸ್)(1) ದಿನಾಂಕ: 6ನೇ ಜನವರಿ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 3ರ ತಾಲ್ಲೂಕು ಪಂಚಾಯತಿಗಳಿಗೆ ಕಾಲಂ 4ರ ತಾಲ್ಲೂಕು ಪಂಚಾಯತಿಗಳ ಅಗತ್ಯ ವೇತನೇತರ ವೆಚ್ಚಕ್ಕಾಗಿ ಕಾಲಂ 5ರಂತೆ ನಮೂದಿಸಿರುವ ಲೆಕ್ಕ ಶೀರ್ಷಿಕೆಗಳಡಿ ಒಟ್ಟು ರೂ.70.00ಲಕ್ಷ (ರೂಪಾಯಿ ಎಪ್ಪತ್ತು ಲಕ್ಷಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

*(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಈ ಕೆಳಗಿನ ಅಧಿಕಾರಿಗಳಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಸಲ್ಲಿಸಿ ಖಜಾನೆಯಲ್ಲಿ ಅಪ್ ಲೋಡ್ ಮಾಡಿಕೊಳ್ಳುವುದು ಹಾಗೂ ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ತಮ್ಮ ತಾಲ್ಲೂಕುಗಳಲ್ಲಿ ಹೊಸದಾಗಿ ಸೃಜಿಸಿರುವ ತಾಲ್ಲೂಕು ಪಂಚಾಯತಿಗಳ ವೇತನೇತರ ವೆಚ್ಚಕ್ಕಾಗಿ ಮಾತ್ರ ಭರಿಸತಕ್ಕದ್ದು.*

*ಈ ಕಾರ್ಯವನ್ನು ಆದ್ಯತೆಯ ಮೇಲೆ ಕ್ರಮವಹಿಸತಕ್ಕದ್ದು, ಯಾವುದೇ ಹಂತದಲ್ಲಿ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು).*

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**

**(ಪುರುಷೋತ್ತಮ್ ಸಿಂಗ್ ಬಿ.ಹೆಚ್.)**
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ), ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
4. ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು

5. ಅಪರ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಸಂಬಂಧಿಸಿದ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
7. ಸಂಬಂಧಿಸಿದ ಜಿಲ್ಲಾ/ಉಪ ಖಜಾನಾಧಿಕಾರಿಗಳು
8. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ

| ಕ್ರಸಂ. | ಜಿಲ್ಲೆ | ಪ್ರಸ್ತುತ ಇರುವ ತಾಲ್ಲೂಕು ಪಂಚಾಯತಿ | ತಾಲ್ಲೂಕು ಪಂಚಾಯತಿ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2515-00-102-0-61-090ರ ವೆಚ್ಚಕ್ಕಾಗಿ ಲೆಕ್ಕ ಶೀರ್ಷಿಕೆ 2515-00-197-1-10-300ರಡಿ ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಬಾಗಲಕೋಟೆ | ಬದಾಮಿ | ಗುಳೇದಗುಡ್ಡ | 2.00 |
| 2 | | ಜಮಖಂಡಿ | ರಬಕವಿ-ಬನಹಟ್ಟಿ | 2.00 |
| 3 | | ಹುನಗುಂದ | ಇಳಕಲ್ | 2.00 |
| 4 | ಬೆಳಗಾವಿ | ಚಿಕ್ಕೋಡಿ | ನಿಪ್ಪಾಣಿ | 2.00 |
| 5 | | ಅಥಣಿ | ಕಾಗವಾಡ | 2.00 |
| 6 | | ಗೋಕಾಕ | ಮೂಡಲಗಿ | 2.00 |
| 7 | | ಬೈಲಹೊಂಗಲ | ಕಿತ್ತೂರು | 2.00 |
| 8 | ಚಾಮರಾಜನಗರ | ಕೊಳ್ಳೇಗಾಲ | ಹನೂರು | 2.00 |
| 9 | ಬಳ್ಳಾರಿ | ಬಳ್ಳಾರಿ | ಕುರುಗೋಡು | 2.00 |
| 10 | | ಕೂಡ್ಲಿಗಿ | ಕೊಟ್ಟೂರು | 2.00 |
| 11 | | ಹೊಸಪೇಟೆ | ಕಂಪ್ಲಿ | 2.00 |
| 12 | ಕಲಬುರಗಿ | ಕಲಬುರ್ಗಿ | ಕಮಲಾಪುರ | 2.00 |
| 13 | | ಚಿತ್ತಾಪುರ | ಶಹಬಾದ್ | 2.00 |
| 14 | ಕೊಪ್ಪಳ | ಯಲಬುರ್ಗಾ | ಕುಕುನೂರು | 2.00 |
| 15 | | ಗಂಗಾವತಿ | ಕನಕಗಿರಿ | 2.00 |
| 16 | | ಗಂಗಾವತಿ | ಕಾರಟಗಿ | 2.00 |
| 17 | ರಾಯಚೂರು | ಲಿಂಗಸೂಗೂರು | ಮಸ್ಕಿ | 2.00 |
| 18 | | ಮಾನ್ವಿ | ಸಿರವಾರ | 2.00 |
| 19 | ಬೆಂಗಳೂರು(ನ) | ಬೆಂಗಳೂರು(ಉತ್ತರ) | ಯಲಹಂಕ | 2.00 |
| 20 | ವಿಜಯಪುರ | ವಿಜಯಪುರ | ಬಬಲೇಶ್ವರ | 2.00 |
| 21 | | ಬಸವನಬಾಗೇವಾಡಿ | ನಿಡಗುಂದಿ | 2.00 |
| 22 | | ಮುದ್ದೇಬಿಹಾಳ | ತಿಕೋಟ | 2.00 |
| 23 | | ಸಿಂಧಗಿ | ದೇವರಹಿಪ್ಪರಗಿ | 2.00 |
| 24 | | ಮುದ್ದೇಬಿಹಾಳ | ತಾಳಿಕೋಟಿ | 2.00 |
| 25 | | ಇಂಡಿ | ಚಡಚಣ | 2.00 |
| 26 | | ಬಸವನಬಾಗೇವಾಡಿ | ಕೊಲ್ಹಾರ್ | 2.00 |
| 27 | ಹಾವೇರಿ | ಹಿರೇಕೆರೂರು | ರಟ್ಟಿಹಳ್ಳಿ | 2.00 |
| 28 | ಮೈಸೂರು | ಹೆಚ್.ಡಿ.ಕೋಟೆ | ಸರಗೂರು | 2.00 |

(11) 22.00 1415599570 7.1.21

(15) 30.00 1415599973 7.1.21

| | | | | |
|---|---|---|---|---|
| 29 | ಚಿಕ್ಕಮಗಳೂರು | ತರೀಕೆರೆ | ಅಜ್ಜಂಪುರ | 2.00 |
| 30 | ಉತ್ತರ ಕನ್ನಡ | ಜೋಯ್ಡಾ | ದಾಂಡೇಲಿ | 2.00 |
| 31 | ಬೀದರ್ | ಹುಮ್ನಾಬಾದ್ | ಚಿಟಗುಪ್ಪ | 2.00 |
| 32 | | ಬೀದರ್ | ಕಮಲಾನಗರ | 2.00 |
| 33 | ಯಾದಗಿರಿ | ಸುರಪುರ | ಹುಣಸಗಿ | 2.00 |
| 34 | | ಯಾದಗಿರಿ | ಗುರುಮಿಟಕಲ್ | 2.00 |
| 35 | ದಾವಣಗೆರೆ | ಹೊನ್ನಾಳಿ | ನ್ಯಾಮತಿ | 2.00 |
| | | **ಒಟ್ಟು** | | **70.00** |

9 18.00 1415500641 7.1.21